# ಧಾರ್ಮಿಕ ಅಸಹನೆ

2015ರ ಗಣರಾಜ್ಯೋತ್ಸವ ಹಲವು ವಿಧದಲ್ಲಿ ವಿಶಿಷ್ಟವಾಗಿ ನಿಲ್ಲುತ್ತದೆ. ವಿಶ್ವದ ದೊಡ್ಡಣ್ಣನೆನಿಸಿಕೊಂಡ ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮರ ಉಪಸ್ಥಿತಿ ಉತ್ಸವಕ್ಕೆ ವಿಶೇಷ ಮೆರುಗು ನೀಡಿದ್ದು ನಿಜ. ಆ ಮೂಲಕ ಭಾರತ ವಿಶ್ವದ ಗಮನ ಸೆಳೆಯುವಲ್ಲಿ ಯಶಸ್ವಿಯಾಯಿತು. ಎರಡು ದೊಡ್ಡ ಪ್ರಜಾಪ್ರಭುತ್ವಗಳ ಮುಖಂಡರು ಒಂದೆಡೆ ಸೇರಿ ಜಾಗತಿಕ ವಿಷಯಗಳನ್ನು ಚರ್ಚಿಸುವುದು, ದೂರಗಾಮಿ ಪರಿಣಾಮ ಬೀರುವ ನಿರ್ಣಯಗಳನ್ನು ತೆಗೆದುಕೊಳ್ಳುವುದು ಸಾಮಾನ್ಯ ವಿಷಯವಲ್ಲ. ಆದರೆ ಅಧ್ಯಕ್ಷ ಒಬಾಮ ದೊಡ್ಡಣ್ಣನಂತೆಯೆ ವರ್ತಿಸಿದ್ದು ಎಲ್ಲರಲ್ಲೂ ಸೋಜಿಗ ಉಂಟುಮಾಡಿದೆ. ಆತ ಎಷ್ಟೇ ದೊಡ್ಡವರಾದರೂ ಅತಿಥೇಯ ರಾಷ್ಟ್ರದ ಘನತೆಯನ್ನು, ಅದರ ವ್ಯಾಪ್ತಿಯನ್ನು ಗಮನದಲ್ಲಿಟ್ಟುಕೊಂಡೇ ಮಾತಾಡಬೇಕಾಗುತ್ತದೆ. ನಮ್ಮಲ್ಲಿ ನ್ಯೂನತೆಗಳಿವೆ ನಿಜ. ಅದನ್ನು ದೊಡ್ಡಣ್ಣ ನೇರ ಬೊಟ್ಟುಮಾಡಿ ತೋರಿಸಿದ್ದು ವಿಷಾದನೀಯ. ಅವರ ಆಹ್ವಾನದಿಂದಾಗಿ ಭಾರತಕ್ಕೆ ತಗುಲಿದ ವೆಚ್ಚ ಸುಮಾರು 900 ಕೋಟಿ ರೂಪಾಯಿ ಎಂದು ಹೇಳಲಾಗಿದೆ. ಅಷ್ಟೊಂದು ಹಣ ತೆತ್ತು ನಾವು ಒಬಾಮರಿಂದ ಬುದ್ಧಿವಾದ ಹೇಳಿಸಿಕೊಂಡಂತಾಗಿದೆ.

ದೆಹಲಿಯ ಸಿರಿಫೋರ್ಟ್ ಭಾಷಣದಲ್ಲಿ ಒಬಾಮ ಭಾರತದಲ್ಲಿ ಧರ್ಮಗಳಲ್ಲಿ ಸಾಮರಸ್ಯವಿಲ್ಲದಿದ್ದರೆ ಪ್ರಗತಿಗೆ ಮಾರಕ ಎಂದು ಹೇಳಿದ್ದರು. ಅದು ಈ ದೇಶದಲ್ಲಿ ನಡೆಯುತ್ತಿರುವ ವಿದ್ಯಮಾನಗಳ ಕುರಿತಾಗಿಯೆ ಇದ್ದರೂ ಸಂದೇಶ ಸೂಚ್ಯವಾಗಿತ್ತು. ಆದರೂ ಅದರ ಅಗತ್ಯತೆಯನ್ನು ಪ್ರಶ್ನಿಸಿ ಕೆಲವು ಚರ್ಚೆಗಳು ನಡೆದಿದ್ದವು. ಅದಕ್ಕೆ ಅಮೆರಿಕ ಸ್ಪಷ್ಟನೆಯನ್ನೂ ನೀಡಿತ್ತು. ಆದರೆ ಅಧ್ಯಕ್ಷರು ತಮ್ಮ ದೇಶಕ್ಕೆ ಹಿದಿರುಗಿದಮೇಲೆ ವಾಷಿಂಗ್ಟನ್‌ನಲ್ಲಿ ನಡೆದ ಸಭೆಯೊಂದರಲ್ಲಿ ಅದನ್ನು ಮತ್ತಷ್ಟು ಸ್ಪಷ್ಟಗೊಳಿಸಿ, ಭಾರತದಲ್ಲಿ ಕೆಲವು ವರ್ಷಗಳಿಂದೀಚೆಗೆ ಹೆಚ್ಚುತ್ತಿರುವ ಧಾರ್ಮಿಕ ಅಸಹನೆ ಮಹಾತ್ಮ ಗಾಂಧಿ (ಬದುಕಿದ್ದರೆ) ಆಘಾತಕ್ಕೊಳಗಾಗುತ್ತಿದ್ದರು ಎಂದು ಹೇಳಿದ್ದಾರೆ. ಇದು ಇನ್ನೂ ಆತಂಕಕಾರಿಯಾದ ಹೇಳಿಕೆ. ಈ ವಿಷಯವಾಗಿ ಪ್ರಧಾನಿಯವರು ತಳೆದಿರುವ ಮೌನವನ್ನು 'ನ್ಯೂಯಾರ್ಕ್ ಟೈಮ್ಸ್' 'ಅಪಾಯಕಾರಿ' ಎಂದು ಬಣ್ಣಿಸಿರುವುದು ಖೇದವೆನಿಸುತ್ತದೆ.

ಇದಕ್ಕೆ ಇಂಬುಗೊಡುವಂತೆ ದೇಶದೊಳಗಿನ ಇಂದಿನ ಧಾರ್ಮಿಕತೆಯ ವಾತಾವರಣ ಆಘಾತಕಾರಿಯಾಗಿಯೇ ಇದೆ. 1999ರಲ್ಲಿ ಒಡಿಸ್ಸಾದಲ್ಲಿ ನಡೆದ 'ಗ್ರಹಾಂ ಸ್ಟೇನ್ಸ್' ಮತ್ತು ಆತನ ಇಬ್ಬರು ಹಸುಳೆಗಳ ಸಜೀವ ದಹನದಿಂದ ಹಿಡಿದು ಇತ್ತೀಚೆಗೆ ಮತಾಂತರದ ಆಪಾದನೆಯ ಮೇಲೆ ಪಾದ್ರಿಗಳನ್ನು ದೈಹಿಕವಾಗಿ ದಂಡಿಸುವುದರವರೆಗೆ ಹಲ್ಲೆಯ ಘಟನೆಗಳು ವರದಿಯಾಗುತ್ತಿವೆ. 1992 ರಲ್ಲಿ ಬಾಬ್ರಿ ಮಸೀದಿಯನ್ನು ಕೆಡವುದರಿಂದ ಹಿಡಿದು ದೇಶದ ವಿವಿಧ ಭಾಗಗಳಲ್ಲಿ ಚರ್ಚುಗಳ ಧ್ವಂಸ ಕಾರ್ಯ ಅವ್ಯಾಹತವಾಗಿ ನಡೆದಿದೆ. ನವದೆಹಲಿಯ ಸೆಯಿಂಟ್ ಸೆಬಾಸ್ಟಿಯನ್ ಚರ್ಚಿಗೆ ಬೆಂಕಿ ಇಟ್ಟ ಪ್ರಕರಣ ಇತ್ತೀಚಿನ ಹೊಸ ಉದಾಹರಣೆ. ಇಂತಹ ಘಟನೆಗಳು ಮತ್ತೆ ಮತ್ತೆ ಮರುಕಳಿಸುತ್ತವೆ. ಅಮೆರಕದಾದ್ಯಂತ ಸುಮಾರು 700 ದೇವಸ್ಥಾನಗಳಿವೆ ಎಂಬುದು ಇವರಿಗೆ ತಿಳಿದಿಲ್ಲವೆ? ತಲೆಮಾರುಗಳನ್ನೇ ಕಳೆದಿರುವ ನಮ್ಮವರು ಅಲ್ಲಿ ಸುಕ್ಷೇಮವಾಗಿರಬಾರದೆ?

ಉರಿವ ಬೆಂಕಿಗೆ ತುಪ್ಪ ಸುರಿಯುವಂತೆ ಇತ್ತೀಚೆಗೆ ಘರ್‌ವಾಪಸಿ ಎನ್ನುವ ಹೊಸ ಕಾರ್ಯಸೂಚಿಯನ್ನು ವಿಶ್ವ ಹಿಂದೂ ಪರಿಷತ್ ವ್ಯಾಪಕವಾಗಿ, ಅಷ್ಟೇ ತೀವ್ರವಾಗಿ ಹಮ್ಮಿಕೊಂಡಿದೆ. ಡಿಸೆಂಬರ್ 2014 ರಲ್ಲಿ ಆಗ್ರಾದಲ್ಲಿ 200 ಮುಸ್ಲಿಮರನ್ನು, ಕಳೆದ ಜನವರಿಯಲ್ಲಿ ಪಶ್ಚಿಮ ಬಂಗಾಲದಲ್ಲಿ 100 ಕ್ರೈಸ್ತರನ್ನು ಹಿಂದೂ ಧರ್ಮಕ್ಕೆ ಮರುಮತಾಂತರಗೊಳಿಸಲಾಗಿದೆ. ಮುಂದಿನ ದಿನಗಳಲ್ಲಿ ಇನ್ನೂ ಸಾವಿರದ ಸಂಖ್ಯೆಯಲ್ಲಿ ಮರುಮತಾಂತರಗಳು ನಡೆಯುತ್ತವೆಂದು ಸಂಘಟಕರು ಹೇಳುತ್ತಿದ್ದಾರೆ. ಇದು ಸಾಲದೆಂಬಂತೆ ಕೆಲವು ಬಲ ಪಂಥೀಯ ಚುನಾಯಿತ ಮುಖಂಡರು ಮತ್ತು ಕಾವಿಯುಟ್ಟ ಸನ್ಯಾಸಿಗಳು ಸಹ ಏಕಪ್ರಕಾರವಾಗಿ ಭಾರತವನ್ನು ಹಿಂದೂ ರಾಷ್ಟ್ರ ಮಾಡುವುದಾಗಿ ಹೇಳಿಕೆ ಕೊಡುತ್ತಿದ್ದಾರೆ. ಅವರ ಹೇಳಿಕೆಗಳು ಅಸಂವಿಧಾನಿಕವೂ, ಪ್ರಚೋದನಾಕಾರಿಯೂ ಆಗಿರುತ್ತವೆ. ಅವಾಚ್ಯ ಪದ ಪ್ರಯೋಗದಲ್ಲಿ ಮಹಿಳಾ ಸಾಧ್ವೀಮಣಿಗಳೂ ಹಿಂದೆ ಬಿದ್ದಿಲ್ಲ. ಸನ್ಯಾಸತ್ವವನ್ನು ಸ್ವೀಕರಿಸಿದ ಮೇಲೆಯೂ ಇವರು ಉದ್ವೇಗವನ್ನು ಕಳೆದುಕೊಳ್ಳದಿರುವುದು, ಸಂಯಮವನ್ನು ಬೆಳೆಸಿಕೊಳ್ಳದಿರುವುದು ಅಚ್ಚರಿ ಮೂಡಿಸುತ್ತದೆ.

ಪ್ರಪಂಚದ ಯಾವ ದೇಶದಲ್ಲಿಯೂ ಒಂದೇ ಜನಾಂಗದ, ಒಂದೇ ಧರ್ಮದ ಜನರಿರುವ ನಿದರ್ಶನಗಳಿಲ್ಲ. ಇರಲು ಸಾಧ್ಯವೂ ಇಲ್ಲ. ಇಂತಹ ಹುಂಬವಾದಗಳನ್ನು ಬಿಟ್ಟು ಸಹಬಾಳ್ವೆಗೆ ನೆರವಾಗುವ ಸಂಗತಿಗಳನ್ನು ಸಾರ್ವಜನಿಕ ಚರ್ಚೆಗೆ ಒಳಪಡಿಸಬೇಕಾಗಿದೆ. ಭಾರತವನ್ನು ಏಕಮೇವಾದ್ವಿತೀಯ ರಾಷ್ಟ್ರ ಮಾಡಲು ಹೊರಟಿರುವ ಎಲ್ಲ ಶಕ್ತಿಗಳು ಈ ದೇಶದ ದೌರ್ಬಲ್ಯಗಳನ್ನು ಮೊದಲು ಅಭ್ಯಾಸಿಸಿ ಪರಿಹಾರ ಕಂಡುಕೊಳ್ಳುವುದು ಪ್ರಥಮ ಆದ್ಯತೆಯಾಗಬೇಕು. ಸದೃಢ ದೇಶದ ಲಕ್ಷಣ ಧಾರ್ಮಿಕ ಧೃವೀಕರಣದಲ್ಲಿಲ್ಲ. ಅದು ಗೋಚರಿಸುವುದು ಮಾನವ ಅಭಿವೃದ್ಧಿ ಸೂಚ್ಯಂಕಗಳಲ್ಲಿ (**human development indexes**). ಮಕ್ಕಳ ಬೆಳವಣಿಗೆಯ ಮಟ್ಟ, ಮಹಿಳೆಯರ ಸುರಕ್ಷತೆ, ವೃದ್ಧರ ಆರೋಗ್ಯ ನಿರ್ವಹಣೆ, ಯುವಕರಿಗೆ ಸಮಾನ ಅವಕಾಶಗಳು. ಇವೇ ಮುಂತಾದ ಮಾನದಂಡಗಳು ಸತ್ವಶಾಲಿಯನ್ನು ರೂಪಿಸಲು ಸಹಕಾರಿಯಾಗುತ್ತವೆ. ಆ ಮೂಲಕ ಸದೃಢ ದೇಶ ನಿರ್ಮಾಣವಾಗುತ್ತದೆ. ಈ ನಿಟ್ಟಿನಲ್ಲಿ ಎಲ್ಲ ಧರ್ಮಗಳೂ ಚಿಂತಿಸುವಂತಾಗಲಿ.

■ ಮೂಚಿ

## ಮಾತೇ ಮುತ್ತು

★ ಪ್ರತಿಯೊಂದು ವಸ್ತುವಿಗೂ ಅದರದ್ದೇ ಆದ ಸೌಂದರ್ಯ ಇರುತ್ತದೆ, ಆದರೆ ಎಲ್ಲರೂ ಅದನ್ನು ಕಾಣುವುದಿಲ್ಲ.

-ಕನ್‌ಫ್ಯೂಶಿಯಸ್

★ ನಾವು ಎಲ್ಲರೂ ಪ್ರಸಿದ್ಧ ವ್ಯಕ್ತಿಗಳಾಗಲು ಬಯಸುತ್ತೇವೆ. ಏನಾದರೂ ಆಗಬೇಕು ಎಂದು ನಾವು ಬಯಸಿದ ಕ್ಷಣವೇ ನಮ್ಮ ಸ್ವಾತಂತ್ರ್ಯ ಇಲ್ಲವಾಗುತ್ತದೆ.

-ಜಿಡ್ಡು ಕೃಷ್ಣಮೂರ್ತಿ

★ ನೀವು ಏನೇ ಆಗಿರಿ, ಒಳ್ಳೆಯವರಾಗಿರಿ.

-ಅಬ್ರಹಾಂ ಲಿಂಕನ್

★ ವಿಧವೆಯ ಕಣ್ಣೀರನ್ನು ನಿವಾರಿಸಲು ಅಥವಾ ಅನಾಥನ ಬಾಯಿಗೆ ಒಂದು ತುತ್ತು ಅನ್ನವನ್ನು ನೀಡಲು ಸಮರ್ಥವಾಗದ ಧರ್ಮದಲ್ಲಾಗಲೀ, ದೈವದಲ್ಲಾಗಲೀ ನನಗೆ ನಂಬಿಕೆ ಇಲ್ಲ.

-ಸ್ವಾಮಿ ವಿವೇಕಾನಂದ

★ ಅಪಾಯಗಳು ಬರದಿರಲಿ ಎಂದು ಪ್ರಾರ್ಥಿಸಬೇಡಿ, ಅವುಗಳು ಬಂದಾಗ ಎದುರಿಸುವ ಶಕ್ತಿಗಾಗಿ ಪ್ರಾರ್ಥಿಸಿ.

-ರವೀಂದ್ರನಾಥ ಠ್ಯಾಗೋರ್

★ ನಿಶ್ಚಿತ ನಿಲುವಿನೊಂದಿಗೆ ಆರಂಭಿಸಿದರೆ ಕೊನೆ ತಲುಪುವಾಗ ಸಂಶಯವೇ ಉಳಿಯುತ್ತದೆ. ಸಂಶಯದೊಂದಿಗೆ ಆರಂಭಿಸಿದರೆ ನಿಶ್ಚಿತವಾದ ಕೊನೆ ತಲುಪುತ್ತೀರಿ.

-ಫ್ರಾನ್ಸಿಸ್ ಬೇಕನ್

★ ಜೀವನವಿಡೀ ಕೈದಿ ಆಗಿರುವುದಕ್ಕಿಂತ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಸಾಯುವುದು ಒಳ್ಳೆಯದು.

-ಬಾಬ್ ಮಾರ್ಲೆ

★ ಸಂಗೀತ ಇರುವುದು ಕಣ್ಣುಗಳಿಗಲ್ಲ; ಕಿವಿಗಳಿಗೆ.

-ಗಾಯಕಿ ಅದೆಲ್

★ ನಾವು ಯಾರಿಗೂ ಏನೂ ಆಗದಿರುವುದು ಜಗತ್ತಿನ ಅತ್ಯಂತ ದೊಡ್ಡ ವ್ಯಾಧಿಗಳಲ್ಲಿ ಒಂದು.

-ಮದರ್ ತೆರೇಸಾ

★ ನನಗೆ ಇನ್ನೊಮ್ಮೆ ಬದುಕುವ ಅವಕಾಶ ಸಿಕ್ಕಿದರೆ, ವಾರಕ್ಕೆ ಒಮ್ಮೆಯಾದರೂ ಕಾವ್ಯವನ್ನು ಓದುವುದು ಮತ್ತು ಸಂಗೀತವನ್ನು ಕೇಳುವುದನ್ನು ಬದುಕಿನ ನಿಯಮವನ್ನಾಗಿಸುತ್ತೇನೆ.

-ಚಾರ್ಲ್ಸ್ ಡಾರ್ವಿನ್

★ ಜೀವನ ಎನ್ನುವುದು ಪರಿಹರಿಸಬೇಕಾದ ಸಮಸ್ಯೆಯಲ್ಲ; ಅನುಭವಿಸಬೇಕಾದ ವಾಸ್ತವ.

-ಸೊರೇನ್ ಕೀರ್ಕ್‌ಗಾರ್ಡ್

★ ತೃಪ್ತಿ ಸಿಗುವುದು ಪ್ರಯತ್ನದಿಂದ, ಗುರಿಯನ್ನು ಸಾಧಿಸುವುದರಿಂದಲ್ಲ. ಗರಿಷ್ಠ ಪ್ರಯತ್ನ ಎಂದರೆ ಗರಿಷ್ಠ ಗೆಲುವು.

-ಮಹಾತ್ಮ ಗಾಂಧೀಜಿ